# ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪಂಕ/ಕೈವಿ/ಆನ್‌ಲೈನ್ ಅರ್ಜಿ/2023-24 ದಿನಾಂಕ: 11.09.2023.

## ಅಧಿಸೂಚನೆ

ಜಿಲ್ಲಾ ಪಂಚಾಯತ್, ರಾಯಚೂರು (ಕೈಗಾರಿಕಾ ವಿಭಾಗ)ದ 2023-24ನೇ ಸಾಲಿನ ವೃತ್ತಿ ಪರ ಕುಶಲಕರ್ಮಿಗಳಿಗೆ ಉಚಿತವಾಗಿ ಜಿಲ್ಲಾ ಉದ್ಯಮ ಕೇಂದ್ರ ಯೋಜನೆ (ಜಿಲ್ಲಾ ವಲಯ) ಅಡಿ ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದ ಒಟ್ಟು 775 ಹೊಲಿಗೆ ವೃತ್ತಿನಿರತ ಮಹಿಳಾ ಕುಶಲಕರ್ಮಿಗಳಿಗೆ ಉಚಿತವಾಗಿ ವಿದ್ಯುತ್ ಚಾಲಿತ ಹೊಲಿಗೆಯಂತ್ರಗಳನ್ನು ವಿತರಿಸಬೇಕಾಗಿದ್ದರಿಂದ ಈ ಕೆಳನಂತೆ ತಾಲೂಕಾವಾರು ಹಾಗೂ ಪ್ರವರ್ಗವಾರು ಗುರಿ ನಿಗದಿಪಡಿಸಿ, ದಿನಾಂಕ: 20.09.2023 ರಿಂದ 20.10.2023ರ ವರೆಗೆ ವೆಬ್‌ಸೈಟ್ 1)www.raichur.nic.in, 2) zpraichur.karnataka.gov.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಕಾರ್ಯಕ್ರಮ ವಿವರ | ಪ್ರವರ್ಗ | ಜಿಲ್ಲಾ ಗುರಿ | ರಾಯ ಚೂರು | ದೇವ ದುರ್ಗ | ಮಾನವಿ | ಸಿರ ವಾರ | ಲಿಂಗ ಸೂಗೂರು | ಮಸ್ಕಿ | ಸಿಂಧ ನೂರು | ಒಟ್ಟು |
|---|---|---|---|---|---|---|---|---|---|---|---|
| 01 | ವೃತ್ತಿಪರ ಕುಶಲಕರ್ಮಿಗಳಿಗೆ ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ ಉಚಿತವಾಗಿ ವಿದ್ಯುತ ಚಾಲಿತ ಹೊಲಿಗೆ ಯಂತ್ರ) | ಪರಿಶಿಷ್ಟ ಜಾತಿ | 775 | 26 | 18 | 14 | 14 | 26 | 18 | 18 | 134 |
| | | ಪರಿಶಿಷ್ಟ ಪಂಗಡ | | 11 | 8 | 6 | 6 | 11 | 8 | 8 | 58 |
| | | ಅಲ್ಪ ಸಂಖ್ಯಾತ | | 23 | 16 | 12 | 12 | 23 | 16 | 16 | 118 |
| | | ಇತರೆ | | 90 | 63 | 48 | 48 | 90 | 63 | 63 | 465 |
| | | | **ಒಟ್ಟು** | **150** | **105** | **80** | **80** | **150** | **105** | **105** | **775** |

**ಅರ್ಹತೆಗಳು :**

- ವಿದ್ಯುತ ಚಾಲಿತ ಹೊಲಿಗೆಯಂತ್ರ ಪಡೆಯುವದಕ್ಕಾಗಿ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 21 ವರ್ಷ ಹಾಗೂ ಗರಿಷ್ಠ 45 ವರ್ಷಗಳು ಇರತಕ್ಕದ್ದು (ಅರ್ಜಿ ಸಲ್ಲಿಸುವ ಪ್ರಾರಂಭವಾಗುವ ದಿನಾಂಕದಂದು)
- ಅರ್ಜಿದಾರರು ಕನಿಷ್ಠ 10ನೇ ತರಗತಿ ಉತ್ತೀರ್ಣಗಾಗಿರಬೇಕು.
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರಕಾರದ ಯಾವುದೇ ಯೋಜನೆಯಡಿ ಈಗಾಗಲೇ ಹೊಲಿಗೆಯಂತ್ರವನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಆನ್‌ಲೈನ್‌ನಲ್ಲಿ 1) www.raichur.nic.in, 2) zpraichur.karnataka.gov.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ

2ನೇ ಪುಟಕ್ಕೆ...

**ಅಪ್ಲೋಡ್ ಮಾಡಬೇಕಾದ ದಾಖಲೆಗಳು (ಸ್ವಯಂ ದೃಢೀಕೃತ ಪ್ರತಿಗಳು):**

- ಆಧಾರ ಕಾರ್ಡ್.
- ಪಡಿತರ ಚೀಟಿ.
- ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ/ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಮಾತ್ರ)
- ಆಯಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೇಲರಿಂಗ್) ವೃತ್ತಿ ಮಾಡುತ್ತಿರುವ ಬಗ್ಗೆ ದೃಢೀಕರಣ ಪ್ರಮಾಣ ಪತ್ರ.
- ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ಅಂಕಪಟ್ಟಿ/ಇನ್ನಿತರ ಪ್ರಮಾಣ ಪತ್ರ)
- ಅಭ್ಯರ್ಥಿ ವಿಕಲಚೇತನ ಇದ್ದಲ್ಲಿ, UDID Card.
- ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ
- ಶೈಕ್ಷಣಿಕ ಅರ್ಹತೆ (ವರ್ಗಾವಣೆ ಪ್ರಮಾಣ ಪತ್ರ/ಅಂಕಪಟ್ಟಿ/ಇನ್ನಿತರ ಪ್ರಮಾಣ ಪತ್ರ)

ಆಯ್ಕೆ ಪ್ರಕ್ರಿಯೆ: ನಿಗದಿಪಡಿಸಿದ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ, **ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ,** ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಪಂಚಾಯತ್ ಹೈದಾರಬಾದ ರಸ್ತೆ, ರಾಯಚೂರು. ಅಥವಾ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಗೆ ಸಂಪರ್ಕಿಸಬಹುದಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ರಾಯಚೂರು.

ಪ್ರತಿಯನ್ನು :

1) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ್, ರಾಯಚೂರು/ದೇವದುರ್ಗ/ ಮಾನವಿ/ಲಿಂಗಸೂಗೂರು / ಮಸ್ಕಿ/ಸಿರವಾರ/ಸಿಂಧನೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
2) ಜಿಲ್ಲೆಯ ಎಲ್ಲಾ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ತಮ್ಮ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರಗೊಳಿಸಲು ಸೂಚಿಸಿದೆ.